ದಿನಾಂಕಃ **6.2.2026** ಅರ್ ಎ **63/2024** ಆರ್ ಡಬ್ಲೂಃ **1**

ಸಾಕ್ಷಿಯನ್ನು ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮಧ್ಯಂತರ ಅರ್ಜಿಯ ಆದೇಶದ ಮೇರೆಗೆ ಮುಂದುವರೆದ ಮುಖ್ಯ ವಿಚಾರಣೆ 1 ನೇ ಎದುರುದಾರರ ಪರ ಶ್ರೀ ಎನ್ ಎ ಪಿ ವಕೀಲರಿಂದ**

ನಾನು ದಿಃ 21-3-2023 ರ ಕಾಪಿ ಅಪ್ಲಕೇಷನ್ ನ ದೃಢೀಕೃತ ಪ್ರತಿ ಹಾಜರು ಪಡಿದ್ದು ಅದನ್ನು ನಿಆರ್ -5 ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಅಪೀಲು ದಾರರ ಪರ ಶ್ರೀ ಪಿ ಎಂ ಬಿ ವಕೀಲರಿಂದ**

ನಾನು ದಾವೆಯನ್ನುಸೀನಿಯರ್ ಸಿವಿಲ್ ಜಡ್ಜ್ ನ್ಯಾಯಾಲಯ ಸಂಡೂರುನಲ್ಲಿ ಹಾಕಿದ್ದೆ ಎಂದರೆ ಸರಿ. ಅದರ ನಂಬರ್ ಒ ಎಸ್ 48-2013 ಎಂದರೆ ಸರಿ. ನಾನು ಅದರಲ್ಲಿ ವಾದಿ ಎಂದರೆ ಸರಿ . ಈ ಅಪೀಲಿನ ಮೆಲ್ಮನವಿದಾರರು ಮತ್ತು ಎದುರುದಾರ 2 ರಿಂದ 6 ರವರು ಆ ದಾವೆಯಲ್ಲಿ ಪ್ರತಿವಾದಿಗಳಾಗಿದ್ದರು ಎಂದರೆ ಸರಿ. ಪ್ರತಿವಾದಿಗಳ ಪರವಾಗಿ ಅಬ್ದುಲ್ ರೆಹಮಾನ್ ಸಾಬ್ ವಕೀಲರು ಹಾಜರಾಗಿದ್ದರು. ಸದರಿಯವರು ದಾವೆಯಲ್ಲಿ ಪ್ರತಿವಾದ ಪತ್ರವನ್ನು ಹಾಕಿದ್ದಾರೆ. ಪ್ರತಿವಾದಿಗಳ ಪವಾಗಿ ಸದರಿ ದಾವೆಯಲ್ಲಿ ಸಾಕ್ಷಿ ಮಾಡಿಸಿಲ್ಲ ಎಂದರೆ ಸಾಕ್ಷಿಯು ನ್ಯಾಯಾಲಯದಿಂದ ಸಮಯಾವಕಾಶ ಕೊಟ್ಟರೂ ಸಹ ಸಾಕ್ಷಿ ಮಾಡಿಸಿಲ್ಲ ಎಂದು ಹೇಳಿರುತ್ತಾರೆ. ವಕೀಲರೇ ಪ್ರತಿವಾದಿಯರನ್ನು ಸಾಕ್ಷಿ ಮಾಡಿಸಲು ಕರೆಸಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರಿಗೆ ದಾವೆಯ ತೀರ್ಪಿನ ಬಗ್ಗೆ ತಿಳಿದಿರಲಿಲ್ಲ ಎಂದರೆ ಸರಿಯಲ್ಲ. ಅಬ್ದುಲ್ ರೆಹಮಾನ್ ಸಾಬ್ ರವರು ನಿಆರ್-5 ರಂತೆ ಅರ್ಜಿ ಸಲ್ಲಿಸಿ ತೀರ್ಪಿನ ಪ್ರತಿ ಪಡೆದ ಸಂಗತಿ ಪ್ರತಿವಾದಿಯರಿಗೆ ತಿಳಿದಿಲ್ಲ ಎಂದರೆ ಸರಿಯಲ್ಲ. ದಾವೆಯಲ್ಲಿ ತೀರ್ಪು ಆದ ನಂತರ ನಾನು ಇಪಿ ಅರ್ಜಿ ಸಲ್ಲಿಸಿದ್ದೆ ಎಂದರೆ ಸರಿ. ಅದರ ಸಂಖ್ಯೆಃ ಇ ಪಿ 39-2023 ಎಂದರೆ ಸರಿ. ನಾವು ಸದರಿ ಇಪಿ ಯಲ್ಲಿ ಆಸ್ತಿಯ ಸ್ವಾಧೀನ ಪಡಿಸಿಕೊಳ್ಳಲು ಸ್ಥಳಕ್ಕೆ ಹೋದ ಸಮಯದಲ್ಲಿ ಪ್ರತಿವಾದಿಯರಿಗೆ ತೀರ್ಪಿನ ಬಗ್ಗೆ ಗೊತ್ತಾಗಿತ್ತು ಎಂದರೆ ಸರಿಯಲ್ಲ. ಅಪೀಲುದಾರರು ಕೂಲಿ ಕೆಲಸ ಮಾಡುವವವರು ಎಂದರೆ ಸರಿಯಲ್ಲ. ಅವರು ಜಿ ಎಸ್ ಡಬ್ಲ್ಯೂ ನಲ್ಲಿ ಕೆಲಸ ಮಾಡಲು ಮಂಜಾನೆ ಹೋದವರು ಸಂಜೆ ಬರುವುದರಿಂದ ಅವರಿಗೆ ವಕೀಲರನ್ನು ಭೇಟಿ ಮಾಡಲು ಆಗಿರಲಿಲ್ಲ ಮತ್ತು ಅವರಿಗೆ ಪ್ರಕರಣದ ಬಗ್ಗೆ ಮಾಹಿತಿ ಇರಲಿಲ್ಲ ಎಂದರೆ ಸರಿಯಲ್ಲ. ಈ ಅಪೀಲು ಸಲ್ಲಿಸಲು ಕಾಲ ವಿಳಂಬ ಆಗಿರುವುದರಿಂದ ಅದನ್ನು ಮನ್ನಾ ಮಾಡಲು ಕೋರಿ ಅರ್ಜಿ ಸಲ್ಲಿಸಲಾಗಿದೆ

ಎಂದರೆ ಸರಿ. ಸದರಿ ಅರ್ಜಿಯನ್ನು ನ್ಯಾಯಾಲಯದಿಂದ ಪುರಸ್ಕರಿಸಿದ್ದಲ್ಲಿ ನನಗೆ ಯಾವುದೇ ತೊಂದರೆ ಉಂಟಾಗುವುದಿಲ್ಲ ಎಂದರೆ ಸರಿಯಲ್ಲ. ಅಪೀಲು ವಜಾ ಆದಲ್ಲಿ ಅಪೀಲುದಾರರಿಗೆ ತೊಂದರೆ ಉಂಟಾಗುತ್ತದೆ ಎಂದರೆ ಸರಿಯಲ್ಲ. ಅರ್ಜಿದಾರರು ತಮ್ಮ ಅರ್ಜಿಯಲ್ಲಿ ಅಪೀಲು ಸಲ್ಲಿಸಲು ಕಾಲ ವಿಳಂಬ ಆಗಿರುವ ಬಗ್ಗೆ ಸೂಕ್ತ ಕಾರಣಗಳನ್ನು ನೀಡಿದ್ದಾರೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ನಮೂದು ಮಾಡಿರುವ ಸಂಗತಿಗಳು ಸುಳ್ಳು ಇರುತ್ತವೆ ಎಂದರೆ ಸರಿಯಲ್ಲ.

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).**

**ಓ.ಹೇ.ಕೇ.ಸರಿ ಇದೆ.**

**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ವಿಶೇಷ ನ್ಯಾಯಾಲಯ, ಬಳ್ಳಾರಿ.**